O.S 141/2021

ಡಿ.ಡಬ್ಲೂ-**1**

ದಿನಾಂಕಃ**15.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲು ವಾದಿ ಪರ ಶ್ರೀ C.S ವಕೀಲರಿಂದಃ</u>**

ನಾನು ಎಸ್.ಎಸ್.ಎಲ್.ಸಿ ವರೆಗೂ ಓದಿರುತ್ತೇನೆ. ನನ್ನ ತಾತ, ತಂದೆ, ಚಿಕ್ಕಪ್ಪ, ಅತ್ತೆಯಂದಿರ ವಂಶಾವಳಿ ನನಗೆ ಗೊತ್ತು. ನನ್ನ ತಾತನ ಹೆಸರು ಕೆ.ಚೆನ್ನಪ್ಪ ಎಂದರೆ ಸರಿ. ಸದರಿಯವರಿಗೆ ವೆಂಕಟಲಕ್ಷ್ಮಮ್ಮ ಎಂಬ ಒಬ್ಬಳೇ ಹೆಂಡತಿ ಎಂದರೆ ಸಾಕ್ಷಿ ಇಬ್ಬರು ಎಂದು ನುಡಿಯುತ್ತಾರೆ. ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ, ಅವರಿಗೆ ಯಾವುದೇ ಮಕ್ಕಳಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ನನ್ನ ತಾತ ಕೆ.ಚೆನ್ನಪ್ಪ ರವರಿಗೆ ಒಬ್ಬಳೇ ಹೆಂಡತಿ ಇದ್ದು, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾತ ಮತ್ತು 1 ನೇ ಪ್ರತಿವಾದಿಗೆ 2 ನೇ ಪ್ರತಿವಾದಿ ಮೊದಲನೇ ಮಗ ಎಂದರೆ ಸರಿ. ನನ್ನ ತಂದೆ ಮೂರನೇ ಪ್ರತಿವಾದಿ 2 ನೇ ಮಗ ಎಂದರೆ ಸರಿ. 1 ಮತ್ತು 2 ನೇ ವಾದಿ ನನ್ನ ಅತ್ತೆಯಂದಿರು, 3 ಮತ್ತು 4 ನೇ ಹೆಣ್ಣು ಮಕ್ಕಳು ಎಂದರೆ ಸರಿ. 4 ನೇ ಪ್ರತಿವಾದಿ ನನ್ನ ಚಿಕ್ಕಪ್ಪ, 5 ನೇ ಮಗ ಎಂದರೆ ಸರಿ. ರಾಜು ಎಂಬುವವರು 6 ನೇ ಮಗ, ಸದರಿಯವರು ಮರಣ ಹೊಂದಿರುತ್ತಾರೆಂದರೆ ಸರಿ. ಸದರಿಯವರಿಗೆ ಸುಮಾ ಎಂಬ 5 ನೇ ಪ್ರತಿವಾದಿ ಒಬ್ಬಳೇ ಹೆಂಡತಿ ಎಂದರೆ ಸರಿ. ಸದರಿಯವರಿಗೆ 6 ಮತ್ತು 7 ನೇ ಪ್ರತಿವಾದಿ ಇಬ್ಬರು ಮಕ್ಕಳು ಎಂದರೆ ಸರಿ.

3 ನೇ ಪ್ರತಿವಾದಿಗೆ ನಾನು, ನನ್ನ ತಾಯಿ ಮತ್ತು ತಂಗಿ ರವರನ್ನು ಹೊರತುಪಡಿಸಿ ಬೇರೆ ಯಾರು ವಾರಸುದಾರರು ಇಲ್ಲ ಎಂದರೆ ಸರಿ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ಸುಳ್ಳು. ದಾವಾ ಆಸ್ತಿ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮೂಲತಃ ಕೆ.ಚೆನ್ನಪ್ಪ ರವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಿ, ಸದರಿ ಆಸ್ತಿ ಪೌತಿ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ನಮೂದು ಇರುತ್ತದೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ನಾನು ಸಲ್ಲಿಸಿರುವ ದಾಖಲೆಗಳ ಬಗ್ಗೆ ಗೊತ್ತು. ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಪಹಣಿ ನೀಡಿದ್ದೇನೆ ಎಂದು ನುಡಿಯುತ್ತಾರೆ.

ಯಾವ ಸಾಲಿನ ಪಹಣಿ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಸ.ನಂ.174 ರ 2014-15 ಸಾಲಿನ ಪಹಣಿ ಎಂದು ನುಡಿಯುತ್ತಾರೆ. ಸದರಿ ಸ.ನಂ. ಪ್ರಸ್ತುತ ಯಾರ ಹೆಸರಿನಲ್ಲಿ ಇದೆ ಎಂದು ತಾಲ್ಲೂಕು ಕಚೇರಿಯಲ್ಲಿ ಸಿಗುತ್ತದೆ ಎಂದರೆ ಸರಿ. ಪ್ರಸ್ತುತ ಈಗ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಕೆ.ಮಹದೇವ ಎಂದು ನುಡಿಯುತ್ತಾರೆ. ಸದರಿ ಕೆ.ಮಹದೇವ ರವರಿಗೆ ನನ್ನ ಅಜ್ಜಿ, ಚಿಕ್ಕಪ್ಪ ಮತ್ತು ಅತ್ತೆಯಂದಿರು ಅಂದರೆ ನನ್ನ ತಂದೆಯನ್ನು ಹೊರತುಪಡಿಸಿ ಎಲ್ಲರೂ ಸೇರಿ ಸ.ನಂ.174 ರ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಬಗ್ಗೆ ಕೆ.ಮಹಾದೇವಪ್ಪ ರವರಿಗೆ ಆಸ್ತಿ ಸೇರಬೇಕೆಂದು ನಿಮ್ಮ ಅಜ್ಜಿ, ಚಿಕ್ಕಪ್ಪ ಮತ್ತು ಅತ್ತೆಯಂದಿರು ಒಂದು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ಕ್ರಯದಾರರಾದ ಕೆ.ಮಹದೇವ ರವರೇ ಸ್ವಾಧೀನ ಇದ್ದಾರೆಂದರೆ ಸರಿ.

ನಿಡಿ-4 ರಲ್ಲಿ ನಮೂದು ಇರುವ ಸ್ವತ್ತು ಕೃಷ್ಣಪ್ಪ ರವರ ಮಗ ಗಿರೀಶ ರವರಿಗೆ ಸೇರಿದ್ದು ಎಂದು ದಿಃ 25.04.2014 ರಂದು ಪ್ರತಿವಾದಿಗಳು ಹಾಗೂ ನನ್ನ ತಂದೆಯನ್ನು ಸೇರಿ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ-6 ರಂತೆ ಹಾಜರುಪಡಿಸಿರುತ್ತೇನೆಂದರೆ ಸರಿ. ಸದರಿ ಆಸ್ತಿಯಲ್ಲಿ ಗಿರೀಶ್ ರವರೇ ಹಕ್ಕುದಾರರಾಗಿ ಸ್ವಾಧೀನ ಇರುತ್ತಾರೆ ಎಂದರೆ ಸರಿ.

ದಾವಾ ಸ್ವತ್ತನ್ನು ಹೊರತುಪಡಿಸಿ ನಿಡಿ-1 ರಿಂದ 8 ದಾಖಲಾತಿಗಳ ಮೇಲೆ ವಾದಿ ಮತ್ತು ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ವಾದಿಗಳು ನಮಗೂ ಹಕ್ಕು ಬರಬೇಕು ಎಂದು ಭಾಗವನ್ನು ಕೇಳಿದ್ದರು ಎಂದರೆ ಸರಿ. ಆ ಸಮಯದಲ್ಲಿ ನನ್ನ ತಂದೆ ಭಾಗ ನೀಡುವುದಿಲ್ಲ ಎಂದು ಉಡಾಫೆ ಉತ್ತರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಾತ ಜೀವಂತ ಇದ್ದಾಗ ಮನೆಯ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಮೃತಪಟ್ಟ ನಂತರ ನಿಮ್ಮ ಅಜ್ಜಿ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಗಳಿಗೆ 7/1 ಭಾಗದ ಹಕ್ಕು ಇದೆ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ. ವಾದಿಗಳಿಗೆ ಭಾಗ

ಕೊಡಬೇಕಾಗುತ್ತದೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗಳಿಗೆ ಬರಬೇಕಾದ ಭಾಗದ ಹಕ್ಕನ್ನು ನೀಡಲು ನನಗೆ ಯಾವುದೇ ತಕರಾರು ಇಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.